# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 982(1094) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 12.03.2026 |
| ಉತ್ತರಿಸಬೇಕಾದ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಟೋಕ್ರೆ, ಕೋಳಿ ಮತ್ತು ಕೋಳಿ ಢೋರ ಸಮುದಾಯವನ್ನು 1956ರಿಂದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಕೇಂದ್ರ ಸರ್ಕಾರವು ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ರಾಜ್ಯದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಟೋಕ್ರೆ ಕೋಳಿ / ಕೋಳಿ ಢೋರ ಇವರಿಗೆ ಜಾತಿ ಪ್ರಮಾಣ ಪತ್ರ ನೀಡದಿರಲು ಕಾರಣವೇನು; | ಜಾತಿ ಪ್ರಮಾಣ ಪತ್ರ ನೀಡದಿರಲು ಕಾರಣಗಳು ಈ ಕೆಳಕಂಡಂತಿದೆ:-<br>1. ವಿಳಾಸದ ದಾಖಲೆಯನ್ನು ಒದಗಿಸದಿರುವುದು.<br>2. ಗುರುತಿನ ಚೀಟಿಯನ್ನು ಒದಗಿಸದಿರುವುದು.<br>3. ನಮೂದಿಸಿದ ಜಾತಿಗೆ ಒಳಪಡದಿರುವುದು.<br>4. ಜಾತಿ ಸಂಬಂಧಿಸಿದ ದಾಖಲೆಯನ್ನು ಒದಗಿಸದಿರುವುದು.<br>5. ಜಾತಿಯ ಬಗ್ಗೆ ದಾಖಲಾತಿಗಳಲ್ಲಿ ತಿದ್ದುಪಡಿ ಮಾಡಿರುವುದು.<br>6. ಬೇರೆ ಜಿಲ್ಲೆಯವರಾಗಿದ್ದು, ಜಾತಿಯ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು. |
| ಇ) | ಟೋಕ್ರೆ ಕೋಳಿ/ಕೋಳಿ ಢೋರ ಜಾತಿ ಪ್ರಮಾಣ ಪತ್ರ ತೆಗೆದುಕೊಂಡು ಸರ್ಕಾರಿ ಸೇವೆ ಮಾಡಿರುವ ನೌಕರದಾರರ ಪದೋನ್ನತಿ ಮತ್ತು ನಿವೃತ್ತಿ ಹೊಂದಿದವರ ಪಿಂಚಣಿಯನ್ನು ತಡ ಹಿಡಿಯಲು ಕಾರಣಗಳೇನು; | ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಲ್ಲಿ ಟೋಕ್ರೆ ಕೋಳಿ / ಕೋಳಿ ಢೋರ ಜಾತಿ ಪ್ರಮಾಣ ಪತ್ರ ಪಡೆದಿರುವ ಸರ್ಕಾರಿ ನೌಕರರ ಪದೋನ್ನತಿ ಮತ್ತು ಪಿಂಚಣಿಯನ್ನು ತಡೆಹಿಡಿದಿರುವ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ. |
| ಈ) | ಕೇಂದ್ರ ಸರ್ಕಾರದ ಸ್ಪಷ್ಟ ಆದೇಶಗಳಿದ್ದರೂ ಈ ಜಾತಿಯವರಿಗೆ ಜಾತಿ ಪ್ರಮಾಣ ಪತ್ರ ಕೊಡುವುದನ್ನು ನಿಲ್ಲಿಸಿ ತೊಂದರೆ ಕೊಡುತ್ತಿರುವ ಅಧಿಕಾರಿಗಳ ಮತ್ತು ಇಲಾಖೆಯವರ ಮೇಲೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು; | ನೈಜವಾಗಿ ಸದರಿ ಜಾತಿಗಳಿಗೆ ಸೇರಿ ಅಗತ್ಯ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸಿದವರಿಗೆ ಯಾವುದೇ ತೊಂದರೆ ಇಲ್ಲದೇ ಜಾತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ. |

**ಕಡತ ಸಂಖ್ಯೆ: STW/SECA/SAD/22/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿಗಳು